# ಪಂಡಿತರ ಗರಡಿಯ ಕ್ರಿಕೆಟ್ ಪಟ್ಟುಗಳು




**ಚಂದ್ರಕಾಂತ್ ಪಂಡಿತರನ್ನು ಮಧ್ಯಪ್ರದೇಶದ ಕ್ರಿಕೆಟಿಗರು ಮೇಷ್ಟ್ರರಂತೆಯೇ ನೋಡಿದರು. ಅವರು ಎಳೆದ ಗೆರೆಯ ಮೇಲೆ ಎಲ್ಲರನ್ನೂ ನಿಲ್ಲಿಸಿದವರು ನಾಯಕ ಆದಿತ್ಯ ಶ್ರೀವಾಸ್ತವ. 41 ಸಲ ರಣಜಿ ಚಾಂಪಿಯನ್ ಆಗಿ ಬೀಗಿರುವ ಮುಂಬೈ ತಂಡವನ್ನು ಫೈನಲ್ಸ್‌ನಲ್ಲಿ 6 ವಿಕೆಟ್‌ಗಳಿಂದ ಮಣಿಸಿದ ಮಧ್ಯಪ್ರದೇಶ ತಂಡದ ಹೋರಾಟದ ಕಥನ ಆಸಕ್ತಿಕರ.**

■ ವಿಶಾಖ ಎನ್.

ಕೋವಿಡ್ ಆತಂಕದ ಮೋಡ ಆಗಿನ್ನೂ ಮಡುಗಟ್ಟಿರಲಿಲ್ಲ. 2020ರ ಫೆಬ್ರುವರಿ 4ರಿಂದ 7ರವರೆಗೆ ಶಿವಮೊಗ್ಗದ ನವುಲೆಯಲ್ಲಿ ಕರ್ನಾಟಕ ಹಾಗೂ ಮಧ್ಯಪ್ರದೇಶ ತಂಡಗಳ ನಡುವೆ ಎಲೈಟ್ ಗ್ರೂಪ್ 'ಬಿ' ಪಂದ್ಯ ನಡೆಯಿತು. ರವಿಕುಮಾರ್ ಸಮರ್ಥ್ ಶತಕ ಹಾಗೂ ಕೃಷ್ಣಪ್ಪ ಗೌತಮ್ ಆರ್ಭಟದ ಫಲವಾಗಿ ಕರ್ನಾಟಕ ಮೊದಲ ಇನಿಂಗ್ಸ್‌ನಲ್ಲಿ 132 ಓವರ್‌ಗಳಲ್ಲಿ 426 ರನ್‌ಗಳನ್ನು ಕಲೆಹಾಕಿತು. 113ಕ್ಕೆ ಮೂರು ವಿಕೆಟ್‌ಗಳನ್ನು ಮಧ್ಯಪ್ರದೇಶ ಕಳೆದುಕೊಂಡಾಗ, ಕರ್ನಾಟಕದ ಆಟಗಾರರ ಮೊಗದಲ್ಲಿ ಉತ್ಸಾಹ. ಆಗ ಆಡಲು ಬಂದವರು ಆದಿತ್ಯ ಶ್ರೀವಾಸ್ತವ. ಹಿಮಾಂಶು ಮಂತ್ರಿ ಆ ಪಂದ್ಯದಲ್ಲಿ ಮಧ್ಯಪ್ರದೇಶದ ನಾಯಕ. ಅವರಿನ್ನೂ ಆಡಲು ಬ್ಯಾಟ್ ಹಿಡಿದು ಬಂದಿರಲಿಲ್ಲ. ಆದಿತ್ಯ ತಾಳ್ಮೆಯ ಸಾಕಾರಮೂರ್ತಿಯಂತೆ ನಿಂತರು. 339 ಎಸೆತಗಳನ್ನು ಒಬ್ಬರೇ ಆಡಿ, 192 ರನ್ ಗಳಿಸಿದ್ದಾಗ ಗೌತಮ್‌ಗೆ ವಿಕೆಟ್ ಒಪ್ಪಿಸಿದರು. ಆರನೇ ಬ್ಯಾಟ್ಸ್‌ಮನ್ ಆಗಿ ಆಡಲು ಬಂದಿದ್ದ ವೆಂಕಟೇಶ್ ಅಯ್ಯರ್ ತಮ್ಮ ಸಹಜ ದಾಳಿಕೋರತನವನ್ನು ಹತ್ತಿಕ್ಕಿ ಆಡುವಂತೆ ಪ್ರೇರೇಪಿಸಿದ್ದವರೂ ಅದೇ ಆದಿತ್ಯ. ಈಗ 'ಇಂಡಿಯನ್ ಪ್ರೀಮಿಯರ್ ಲೀಗ್' ಆಡುತ್ತಿರುವ ಯುವೋತ್ಸಾಹಿಗಳಲ್ಲಿ ಒಬ್ಬರಾದ ವೆಂಕಟೇಶ್ ಅಯ್ಯರ್ ಆಗ 217 ಎಸೆತಗಳನ್ನು ಆಡಿ 86 ರನ್ ಮಾಡಿದ್ದರು. ಕರ್ನಾಟಕಕ್ಕಿಂತ ಇನ್ನೂ ಇಪ್ಪತ್ತನಾಲ್ಕೂವರೆ ಓವರ್ ಹೆಚ್ಚು ಕಾಲ ಆಡಿ ಮಧ್ಯಪ್ರದೇಶ ಮೊದಲ ಇನಿಂಗ್ಸ್‌ನಲ್ಲಿ 431 ರನ್ ಜಮೆ ಮಾಡಿತು. ಡ್ರಾ ಆದ ಆ ಪಂದ್ಯದಲ್ಲಿ ಉಳಿದದ್ದೆಲ್ಲ ಔಪಚಾರಿಕತೆಯಷ್ಟೆ.

ಈಗ ಆದಿತ್ಯ ಶ್ರೀವಾಸ್ತವ ಮಧ್ಯಪ್ರದೇಶ ತಂಡದ ನಾಯಕ. ಅಷ್ಟೇ ಅಲ್ಲ, 2021–22ರ ರಣಜಿ ಕಪ್ ಎತ್ತಿಹಿಡಿದ ಧೀಮಂತ. ಈ ಸಲ ರಣಜಿ ಋತುವಿನಲ್ಲಿ ಆದಿತ್ಯ ಬ್ಯಾಟಿಂಗ್‌ನಲ್ಲಿ ತಮ್ಮ ಹಳೆಯ ಫಾರ್ಮ್‌ನಲ್ಲಿ ಇರಲಿಲ್ಲವಾದರೂ ತಂಡವನ್ನು ಅವರು ಮುನ್ನಡೆಸಿದ ರೀತಿಗೆ ತರಬೇತುದಾರ ಚಂದ್ರಕಾಂತ್ ಪಂಡಿತ್ ಪೂರ್ಣ ಅಂಕ ನೀಡಿದ್ದಾರೆ.

ಚಂದ್ರಕಾಂತ್ ಪಂಡಿತ್ 1990ರ ದಶಕದಲ್ಲಿ ರಣಜಿ ಪಂದ್ಯಗಳನ್ನು ಆಡಿದ್ದವರು. ಆ ದಶಕದ ಕೊನೆಯ ಭಾಗದಲ್ಲಿ ಒಮ್ಮೆ ಕರ್ನಾಟಕದ ಎದುರು ಫೈನಲ್ಸ್‌ನಲ್ಲಿ ಮಧ್ಯಪ್ರದೇಶ ಸೋಲುಂಡಾಗ ಅವರೇ ನಾಯಕರಾಗಿದ್ದರು. ಈಗ ಬೆಂಗಳೂರಿನಲ್ಲಿ, ಆಗ ಈಡೇರದ ಕನಸನ್ನು ನನಸಾಗಿಸಿಕೊಂಡ ಸಂತೃಪ್ತಭಾವ ಅವರದ್ದು.

ಇಂಥದೊಂದು ಸಾಧನೆಯನ್ನು ಮಧ್ಯಪ್ರದೇಶ ಮಾಡಲು ಪಂಡಿತ್ ಶಿಸ್ತಿನ ಮೇಷ್ಟ್ರಂತೆ ವರ್ತಿಸಿದ್ದೇ ಕಾರಣ. ಆದಿತ್ಯ ಹೋದವರ್ಷ ಮದುವೆಯಾದರು. ಆಗ ಅವರಿಗೆ ಎರಡು ದಿನಗಳ ರಜೆಯನ್ನಷ್ಟೆ ಪಂಡಿತ್ ನೀಡಿದ್ದು. ಹನಿಮೂನಿಗಿಂತ ಸಾಧನೆ ಮಾಡುವ ಹನುಮಾನ್ ಆಗಬೇಕು ಎನ್ನುವುದು ಅವರ ಮನದಲ್ಲಿತ್ತು. ಸಾಮಾನ್ಯವಾಗಿ ರಣಜಿ ಕ್ರಿಕೆಟ್ ಟೂರ್ನಿ ನಡೆಯುವಾಗ ಬೇರೆ ಸ್ಥಳಗಳಿಗೆ ಬಂದಾಗ ಆಟಗಾರರು ಮಾಲ್‌ಗಳಿಗೆ ಹೋಗಿ ಬರುವುದು, ಸಿನಿಮಾ ನೋಡಿ ರಿಲ್ಯಾಕ್ಸ್ ಆಗುವುದು, ಫುಟ್‌ಬಾಲ್ ಅಥವಾ ಟೆನಿಸ್‌ನಂಥ ಆಟದ ಬಗೆಗೆ ಚರ್ಚೆ ಮಾಡಿ ಹಗುರಾಗುವುದು ಇವನ್ನೆಲ್ಲ ಪುನರುತ್ಥಾನದ ಮಾರ್ಗಗಳೆಂದು ಕೆಲವು ಕೋಚ್‌ಗಳು ನಂಬಿದ್ದಾರೆ. ಚಂದ್ರಕಾಂತ್ ಪಂಡಿತ್ ತಮ್ಮ ಆಟಗಾರರಿಗೆ ಇಂತಹ ಯಾವುದೇ ಸ್ವಾತಂತ್ರ್ಯವನ್ನು ಈ ಸಲ ಕೊಟ್ಟಿರಲಿಲ್ಲ. ದಿನದಾಟವಾಗಲೀ, ಅಭ್ಯಾಸವಾಗಲೀ ಮುಗಿದ ನಂತರ ತಂಡ ಹೋಟೆಲ್ ತಲುಪುತ್ತಿದ್ದಂತೆ ಅಲ್ಲೊಂದು ಕ್ಲಾಸ್ ತೆಗೆದುಕೊಳ್ಳುತ್ತಿದ್ದರು. ಅದು ಕೇವಲ ಬಯ್ಯುವ ಕಾರ್ಯಕ್ರಮವಷ್ಟೇ ಅಲ್ಲ. ಆ ದಿನದಲ್ಲಿ ಕೈಕೊಟ್ಟ ಯೋಜನೆಗಳು ಯಾವುವು, ಮರುದಿನ ಎದುರಾಳಿಗಳನ್ನು ಹೇಗೆಲ್ಲ ಹಣಿಯಬೇಕು ಎಂಬ ಹೆಣಿಗೆ ಕಟ್ಟಲು ಅವರು ಉಪಯೋಗಿಸಿಕೊಳ್ಳುತ್ತಿದ್ದ ಸಮಯ ಅದಾಗಿತ್ತು. 'ಕ್ವಿಕ್', 'ಬಾಯ್ಸ್' ಎಂಬ ಚಂದ್ರಕಾಂತ್ ಪಂಡಿತ್ ಬಾಯಿಯಿಂದ ಬರುತ್ತಿದ್ದ ಎರಡು ಪದಗಳನ್ನು ಕೇಳಿಕೇಳಿ ಕೆಲವು ಯುವ ಆಟಗಾರರಿಗೆ ಕರ್ಣಾನಂದವೇನೂ ಆಗಿರಲಿಕ್ಕಿಲ್ಲ. ಆದರೆ, ಅದು ರಣಜಿ ಕಪ್ ಅನ್ನು ತಂಡ ಮೊದಲ ಬಾರಿ